ಒ.ಎಸ್. ನಂ.70/2022
ಪಿಡಬ್ಲು-1

ದಿನಾಂಕ 04.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ಸರ್ವೆ ನಂ.354/3 ಕ್ಷೇತ್ರ 06-ಎಕರೆ 21-ಗುಂಟೆ ಜಮೀನು ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಸರ್ವೆ ನಂಬರನಲ್ಲಿ 01-ಎಕರೆ 30-ಗುಂಟೆ ಜಮೀನು KBJNL ರವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪೂರ್ಣ ಜಮೀನನ್ನು ದಾವಾಸ್ತಿಯಲ್ಲಿ ಪೂರ್ಣವಾಗಿ ಸೇರ್ಪಡೆ ಮಾಡಿಲ್ಲ ಆದರೆ ಭಾಗಶಃ ಜಮೀನು ಮಾತ್ರ ಸೇರ್ಪಡೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ.354/2 ರಲ್ಲಿ ಎಲ್ಲಾ ಹಿಸ್ಸೆಗಳನ್ನು ವಾದ ಪತ್ರದಲ್ಲಿ ಸೇರ್ಪಡೆ ಮಾಡಲು ಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮದುವೆ 2006 ರಲ್ಲಿ ಆಗಿರುತ್ತದೆ. 2006 ರಲ್ಲಿ ನನ್ನ ತಂದೆ ಯಾವುದೆ ಜಮೀನು ಮಾರಾಟ ಮಾಡಿಲ್ಲ ಎಂದರೆ ಸರಿ. ನನ್ನ ತಂದೆಗೆ ಯಾವ ಕಾರಣಕ್ಕಾಗಿ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಸಾಲವಾಗಿತ್ತು ಆದ್ದರಿಂದ ಜಮೀನು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಯಾವ ರೀತಿಯ ಸಾಲ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸರ್ವೆ ನಂ.354/2 ರಲ್ಲಿ 04-ಎಕರೆ ಜಮೀನು ಮಾರಾಟ ಮಾಡುವಾಗ ನನ್ನ ಸಹಿ ಪಡೆದಿಲ್ಲ ಎಂದರೆ ಸರಿ. ನನ್ನ ತಂದೆ ನನ್ನ ಪಾಲಿನ ಸಾಲವನ್ನು ನಾನೇ ತೀರಿಸುತ್ತೇನೆಂದು ನನ್ನ ಸಹಿ ಪಡೆದಿಲ್ಲ. ನನ್ನ ತಂದೆ 04-ಎಕರೆ ಜಮೀನು ಮಾರಾಟ ಮಾಡುವಾಗ 1 ಮತ್ತು 2ನೆ ಪ್ರತಿವಾದಿಯರ ಸಹಿ ಪಡೆದಿಲ್ಲ.

ದಾವಾ ಸ್ವತ್ತು ನಂ.4 ರ ಉದ್ದಗಲ ಯಾವ ಆಧಾರದ ಮೇಲೆ ಬರೆಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ಈ ಕುರಿತು ನನ್ನ ವಕೀಲರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಂ.4 ರ ಎಷ್ಟು ಉದ್ದಗಲ ಇದೆ ಎಂದು ದಾಖಲೆ ನಿಮ್ಮ ವಕೀಲರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿ ಪಹಣಿಯ ಆಧಾರದ ಮೇಲೆ ನೀಡಿರುತ್ತೇನೆ ಎಂದು ಹೇಳಿರುತ್ತೇನೆ.

1 ಮತ್ತು 2ನೆ ಪ್ರತಿವಾದಿಯರು ನನಗೆ ಮಾಹಿತಿ ನೀಡಿ ನನ್ನ ಮುಖಾಂತರ ಈ

ದಾವೆ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. 1 ಮತ್ತು 2ನೆ ಪ್ರತಿವಾದಿಯರು ಮಾತು ಕೇಳಿ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.354/2 06 ಎಕರೆ 04-ಗುಂಟೆ ಜಮೀನು 2018-19 ರವರೆಗೆ ನನ್ನ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಸರ್ವೆ ನಂಬರನಲ್ಲಿ ರೂ.1,00,000/- ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಬ್ಯಾಂಕನ ಋಣಭಾರ ಇರುತ್ತದೆ ಎಂದರೆ ಸರಿ. ಸದರಿ ನಂಬರನಲ್ಲಿ ಕೊಳವೆ ಬಾವಿ ಮತ್ತು ಬಾವಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

1 ರಿಂದ 3ನೆ ಪ್ರತಿವಾದಿಯರು ತಮ್ಮ ತಮ್ಮ ಪಾಲಿಗೆ ಬಂದ ಜಮೀನಿನ ಮೇಲೆ ಸಾಲ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ 1 ರಿಂದ 3ನೆ ಪ್ರತಿವಾದಿಯರಿಗೆ ಪಾಲು ಮಾಡುವಾಗ ನಾನು ಯಾವುದೆ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಅವರು ಪಾಲು ಮಾಡಿಕೊಂಡಿದ್ದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 1 ರಿಂದ 3ನೆ ಪ್ರತಿವಾದಿಯರಿಗೆ ಯಾವಾಗ ಪಾಲು ಆಯಿತು ಎಂದರೆ ಸಾಕ್ಷಿ 2018 ರಲ್ಲಿ ಪಾಲು ಆಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಸ್ವತ್ತುಗಳು ಕೂಡು ಕುಟುಂಬದ ಆಸ್ತಿಗಳು ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

2ನೆ ಪ್ರತಿವಾದಿ ಕೃಷಿ ಕೆಲಸ ಮಾಡುತ್ತಿದ್ದು ಅದರಿಂದ ಬಂದ ಆದಾಯದಿಂದ ಆತನ ಹೆಂಡತಿಯ ಹೆಸರಿಗೆ ಮನೆ ಖರಿದಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. 2ನೆ ಪ್ರತಿವಾದಿಯ ಹೆಂಡತಿ ಟೇಲರಿಂಗ ಕೆಲಸ ಮಾಡಿ ಮನೆ ಖರೀದಿಸಿದ ಬಗ್ಗೆ ಯಾವುದೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 2ನೆ ಪ್ರತಿವಾದಿಯ ಹೆಂಡತಿ ಟೇಲರಿಂಗ ಕೆಲಸ ಮಾಡಿ ಮನೆ ಖರೀದಿಸಿದ ಬಗ್ಗೆ ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಅದು ನನಗೆ ಸಂಬಂಧಿಸಿದ್ದಲ್ಲ ಆದ್ದರಿಂದ ನಾನು ಬರೆಸಿಲ್ಲ ಮತ್ತು ವಿವರಣೆ ನಿಡಿಲ್ಲ ಎಂದು ಸಾಕ್ಷಿ ಹೇಳಿರುತ್ತಾರೆ. 2ನೆ ಪ್ರತಿವಾದಿ ಮದುವೆ 2004 ರಲ್ಲಿ ಆಗಿರುತ್ತದೆ. 1ನೆ ಪ್ರತಿವಾದಿ ಈರಮ್ಮ ಗಂಡ ಬಸವರಾಜ ಶೀಲವಂತರವರಿಗೆ 04-ಎಕರೆ ಜಮೀನು 2020 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ತಂದೆ ತನ್ನ ಹೆಸರಿನಲ್ಲಿ 2 ಲಕ್ಷ ಹಣವಿಟ್ಟುಕೊಂಡು 2 ಮತ್ತು 3ನೆ ಪ್ರತಿವಾದಿಯರಿಗೆ ಪಾಲು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸರ್ವೆ ನಂ.335/1 ಒಟ್ಟು 08-ಎಕರೆ 10-ಗುಂಟೆ ಜಮೀನಿನ ಪೈಕಿ 02-ಎಕರೆ 10-ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ

ವಿಚಾರ ಗೊತ್ತಾದ ನಂತರ ನನ್ನ ದಾವೆಯಲ್ಲಿ ದಾವಾಸ್ತಿಗಳನ್ನು ಸೇರಿಸಲು ವಾದ ಪತ್ರ ತಿದ್ದುಪಡಿ ಮಾಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಉಳಿದ ಜಮೀನಿನಲ್ಲಿ ಪಾಲು ಸಿಕ್ಕರೆ ಸಾಕು ಎಂದು ಹೇಳುತ್ತಾರೆ. ಖರೀದಿ ಪತ್ರದಲ್ಲಿ ನನ್ನ ಹಾಗೂ 2 ಮತ್ತು 3ನೆ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವಾಸ್ತಿಗಳು ನನ್ನ ತಂದೆ ಪಾಲು ಮಾಡಿದ್ದರಿಂದ ನನಗೆ ದಾವಾಸ್ತಿಗಳಲ್ಲಿ ಪಾಲು ಕೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. 3ನೆ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳ ಚೆಕಬಂದಿ ಸರಿಯಾಗಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.335/1 ರ ಪಶ್ಚಿಮಕ್ಕೆ ನಾನಾಗೌಡರವರ ಜಮೀನು ಇರುತ್ತದೆ ಎಂದು ಬರೆಸಿದ್ದು ಆದರೆ ಪಶ್ಚಿಮಕ್ಕೆ ರುದ್ರಗೌಡರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಿದ ಜಮೀನಿನ ಪಶ್ಚಿಮಕ್ಕೆ ರುದ್ರಗೌಡರವರ ಜಮೀನು ಇರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮಾರಿದ ಜಮೀನಿನ ಪೂರ್ವಕ್ಕೆ ಮಹಾಂತಗೌಡರವರ ಜಮೀನು, ಉತ್ತರಕ್ಕೆ ಪರಮಾನಂದ ತಂದೆ ಶಾಂತಗೌಡರವರ ಜಮೀನು ಇರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕಾರ ಪಾರಂ ನಂ.10 ಆಗಿರುತ್ತವೆ ಎಂದರೆ ಸರಿಯಲ್ಲ.

ಸರ್ವೆ ನಂ.354/2 ರ ಪೂರ್ವಕ್ಕೆ ದೇವಿಂದ್ರ ಮಾದರರವರ ಜಮೀನು ಇದ್ದು ನಾಗಪ್ಪ ಮಾದರ ಎಂದು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ.354/2 ರ ಪಶ್ಚಿಮಕ್ಕೆ ಶಾಂತಬಾಯಿರವರ ಜಮೀನು ಇದ್ದು ಶಿವಾನಂದ ಬಂಟನೂರವರ ಜಮೀನು ಎಂದು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ.354/2 ರ ಪೂರ್ವಕ್ಕೆ ಸಾಹೇಬಗೌಡರವರ ಜಮೀನು ಇದ್ದು ಈರಮ್ಮ ರವರ ಜಮೀನು ಎಂದು ಬರೆಸಿರುತ್ತೀರಿ ಎಂದರೆ ಸರಿಯಲ್ಲ. ಸರ್ವೆ ನಂ.354/2 ರ ದಕ್ಷಿಣಕ್ಕೆ ಮಹಾಂತಪ್ಪಗೌಡರವರ ಜಮೀನು ಇದ್ದು ಕೆನಾಲ ಎಂದು ಬರೆಸಿರುತ್ತೀರಿ ಎಂದರೆ ಸರಿಯಲ್ಲ.

ನಾನು ಒಟ್ಟು ಕುಟುಂಬದ ಸದಸ್ಯಳಲ್ಲ ಮತ್ತು ಜಂಟಿ ಸ್ವಾಧಿನತೆ ಹೊಂದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ